

### ಟಾಪರ್

ಗುಂಡ: ಎಕ್ಸಾಮ್ ಟಾಪರ್ ಆಗುವುದು ಹೇಗೆ ಅಂತ ನನಗೆ ಚೆನ್ನಾಗಿ ಗೊತ್ತು.
ಯಂಕ: ಹೌದಾ. ಮತ್ತೆ ನೀನ್ಯಾಕೆ ಒಮ್ಮೆಯೂ ಟಾಪರ್ ಆಗಲಿಲ್ಲ?
ಗುಂಡ: ನೋಡೋ ಯಂಕ, ಎಲ್ಲರಿಗೂ ಅವಕಾಶ ಸಿಗಲಿ ಅನ್ನೋ ಕಾರಣಕ್ಕೆ ನಾನು ಇನ್ನೂ ಟಾಪರ್ ಆಗದೇ ಸುಮ್ಮನಿದ್ದೇನೆ.

★★★

### ಒಂಟಿ

ಯಂಕ: ಹೇ ಗುಂಡ ನಿನಗಿನ್ನೂ ಮದುವೆಯಾಗಿಲ್ಲ. ನೀನು ಒಂಟಿಯಾಗಿರುವೆ ತಾನೇ?
ಗುಂಡ: ಲೋ ನಾನೆಲ್ಲೋ ಒಂಟಿ ಇದೀನಿ. ನನ್ನ ಹತ್ತಿರ ಮೊಬೈಲ್ ಇದೆ. ಚಾರ್ಜರ್ ಇದೆ. ಅವು ಸೇರಿದಂತೆ ನಾನು ತುಂಬಾ ಖುಷಿಯಿಂದ ಇದ್ದೇವೆ.

★★★

### ಯಾಕಂದ್ರೆ

ಗುಂಡ: ಲೇ ಯಂಕ ನಾನ್ ಒಂಥರಾ ಸಮಾಜ ಸೇವಕ ಇದ್ದಂತೆ ಕಣೋ.
ಯಂಕ: ಹೌದಾ ಹೇಗಪ್ಪಾ ಅದು.
ಗುಂಡ: ಈಗ, ಪರೀಕ್ಷೆಯಲ್ಲಿ ಬೇರೆಯವರ ಪೇಪರ್ ನೋಡ್ತಾ ಇರ್ತೀನಿ. ಹಾಗಂತ ನನಗೇನೂ ಬರಲ್ಲ ಅಂತ ಅಲ್ಲ.
ಯಂಕ: ಮತ್ತೆ ಯಾಕೆ ನೋಡೋದು?
ಗುಂಡ: ಅವರು ಸರಿಯಾಗಿ ಬರೆದಿದ್ದಾರೋ ಇಲ್ಲವೋ ಅಂತ ಚೆಕ್ ಮಾಡ್ತಿರ್ತೀವಿ ಅಷ್ಟೇ! ಅದು ಒಂಥರಾ ಸಮಾಜಸೇವೆ ತಾನೇ.

★★★

### ಹಲ್ಲಿ

ಡಾಕ್ಟರ್: ಕಿವಿಯೊಳಗೆ ಹಲ್ಲಿ ಹೋಗುವವರೆಗೂ ಏನು ಮಾಡುತ್ತಿದ್ದೆ ಗುಂಡ.
ಗುಂಡ: ಮೊದಲು ಸೊಳ್ಳೆ ಹೋಯಿತು ಡಾಕ್ಟ್ರೇ. ಅದನ್ನು ಹಿಡಿಯೋಕೆ ಹಲ್ಲಿ ಹೋಯ್ತು. ಹೋಗಿ ಸೊಳ್ಳೆ ಹಿಡ್ಕೊಂಡು ಬರಲಿ ಅಂತ ಸುಮ್ಮನಿದ್ದೆ. ಹಾಳಾದ್ ಬರ್ಲೆ ಇಲ್ಲ. ಒಳಗೆ ಸೇರ್ಕೊಂಡು ಲೊಚಗುಡ್ತಾ ಇದೆ.



### ಗೊತ್ತಿಲ್ಲ

ಗುಂಡ: ಸೂರ್ಯ ಹುಟ್ಟುವುದಕ್ಕಿಂತ ಮೊದಲೇ ಏಳಬೇಕು ಎಂದು ಜನ ಹೇಳುತ್ತಾರೆ.
ಯಂಕ: ಹೌದು ಅದರಲ್ಲಿ ತಪ್ಪೇನಿದೆ?
ಗುಂಡ: ತಪ್ಪಿಲ್ಲ, ಆದರೆ ಸೂರ್ಯ ನಮಗಿಂತ ಮೊದಲೇ ಮಲಗುತ್ತಾನೆ ಅಂತ ಜನಕ್ಕೆ ಗೊತ್ತಿಲ್ಲ.

★★★

### ಚಹಾ

ಗುಂಡ: ಚಹಾ ಕುಡಿದರೆ ತಲೆನೋವು ಹೋಗುತ್ತೆ ಅಂತ ಹೇಳ್ತಾರೆ ನಿಜನಾ ಮೇಷ್ಟ್ರೇ?
ಮೇಷ್ಟ್ರು: ಅದಕ್ಕೆ ಕಣೋ ಈಗ ನಾನು ಚಹಾ ಕುಡಿದು ಪಾಠ ಮಾಡ್ತಿದ್ದೀನಿ.
ಗುಂಡ: ಹಾಗಾದರೆ ನಮಗೂ ಚಹಾ ತರಿಸಿ ಕೊಡಿ. ಮೇಷ್ಟ್ರೇ ನಿಮ್ಮ ಪಾಠ ಕೇಳಿ ತಲೆ ನೋಯ್ತಾ ಇದೆ.

★★★

### ಫ್ರೆಂಡ್

ಗುಂಡ: ಅಮ್ಮಾ ಭಿಕ್ಷೆ ಹಾಕಿ.
ಪದ್ದಿ: ನಿಮ್ಮನ್ನು ಎಲ್ಲಿಯೋ ನೋಡಿದ ನೆನಪು.
ಗುಂಡ: ಹ್ಞೂಂ! ನಾವಿಬ್ಬರೂ ಫೇಸ್‌ಬುಕ್ ಫ್ರೆಂಡ್ಸ್.

★★★

### ಹಾಸ್ಟೆಲ್

ಟೀಚರ್: ಯಾಕೆ ಹೋಮ್ ವರ್ಕ್ ಮಾಡಿಲ್ಲ?
ಗುಂಡ: ಯಾಕೆ ಮಾಡಿಲ್ಲ ಅಂದರೆ ನಾನು ವಾಸವಿರುವುದು ಹಾಸ್ಟೆಲ್‌ನಲ್ಲಿ ಸರ್.

★★★

### ತೊಂದರೆ

ಯಂಕ: ನಮ್ಮ ತಾತ ಮುತ್ತಾತಂದರಿಗೆ ಇಂಗ್ಲಿಷ್‌ನವರು ತೊಂದರೆ ಕೊಡ್ತಾ ಇದ್ರು.
ಗುಂಡ: ಈಗ ಇಂಗ್ಲಿಷ್ ನಮಗೆ ತೊಂದರೆ ಕೊಡ್ತಾ ಇದೆಯಲ್ಲ.

★★★

### ಶಿಕ್ಷೆ

ಹೆಂಡತಿ: ರೀ, ಮದುವೆಯಾಗಿ ಹೇಗೆ ಇಪ್ಪತ್ತು ವರ್ಷ ಕಳೆದು ಹೋದವು ಅಂತ ಗೊತ್ತೇ ಆಗಲಿಲ್ಲ.
ಗಂಡ: ಹೌದು ಕಣೇ, ಶಿಕ್ಷೆಯ ಅನುಭವ ಆಗುವುದು ಕೈದಿಗೆ ಮಾತ್ರ ಜೈಲರ್‌ಗಲ್ಲ.

(ಸಂಗ್ರಹ) ಭೋಜರಾಜ ಸೊಪ್ಪಿಮಠ, ಕೊಪ್ಪಳ

